**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ-23 ಚಾಸಾ- 28

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಅಲ್ತಾಫ್ ಖಾನ್ |
| ತಂದೆಯ ಹೆಸರುಃ | ಃ | ಲೇಟ್ ಅಮೀರ್ ಖಾನ್ |
| ವಯಸ್ಸುಃ | ಃ | 66 ವರ್ಷ |
| ಉದ್ಯೋಗಃ | ಃ | ನಿವೃತ್ತ ಎಇಇ |
| ವಾಸಃ | ಃ | ಚಿಂತಾಮಣಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 29-08-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2013 ರಿಂದ 2016 ರವರೆಗೆ ಕರ್ನಾಟಕ ಗೃಹಮಂಡಳಿ ಹಾಸನದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ನವೆಂಬರ್ 2013 ರಲ್ಲಿ ಲೋಕಾಯುಕ್ತ ಪೊಲೀಸರು ಮನವಿ ನೀಡಿ ನಿವೇಶನ ಸಂಖ್ಯೆ ಎಂಐಜಿ 1442 ಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಕೇಳಿದ್ದು ಸದರಿ ಮನವಿ ಪತ್ರ ನಿಪಿ-118 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ಕವರಿಂಗ್ ಲೆಟರ್ ನೊಂದಿಗೆ ಮನವಿಯಲ್ಲಿ ಕೋರಿದ ನಿವೇಶನಕ್ಕೆ ಸಂಬಂಧಪಟ್ಟ ಹಂಚಿಕೆ ಪತ್ರದ ದೃಢೀಕೃತ ನಕಲು, ಹಣ ಸಂದಾಯ ಮಾಡಿದ ಕುರಿತು ಇರುವ ರಶೀದಿಗಳ ದೃಢೀಕೃತ ನಕಲುಗಳನ್ನು ಹಾಸನ ಲೋಕಾಯುಕ್ತ ಪೊಲೀಸರಿಗೆ ನೀಡಿದ್ದೇನೆ. ಸದರಿ ಮನವಿಯನ್ನು ನಿಪಿ-119, ಹಂಚಿಕೆ ಪತ್ರ ನಿಪಿ-120 ಮತ್ತು

ರಶೀದಿಗಳನ್ನು ನಿಪಿ-121 ರಿಂದ 125 ಎಂದು ಗುರುತಿಸಲಾಯಿತು. ನಿವೇಶನದ ಪ್ಲ್ಯಾನ್ ಅಪ್ರೂವಲ್ ಕೋರಿರುವ ಪತ್ರ ಕೂಡ ಲೋಕಾಯುಕ್ತ ಪೊಲೀಸರು ನೀಡಿದ್ದು, ಅದನ್ನು ನಿಪಿ-126 ಎಂದು ಗುರುತಿಸಲಾಯಿತು. ಹಂಚಿಕೆ ತಿಳುವಳಿಕೆ ಪತ್ರ, ಸೂಚನೆಗಳು ಮತ್ತು ಷರತ್ತುಗಳ ದೃಢೀಕೃತ ನಕಲುಗಳನ್ನು ನಿಪಿ-126 ರೊಂದಿಗೆ ಸಲ್ಲಿಸಿದ್ದು ಅದನ್ನು ನಿಪಿ-127 ಮತ್ತು ನಿಪಿ-128 ಎಂದು ಗುರುತಿಸಲಾಯಿತು. ಸದರಿ ದಾಖಲೆಯೊಂದಿಗೆ ಆರೋಪಿತನ ಪತ್ನಿ ನೀಡಿದ ಪ್ರಮಾಣಪತ್ರದ ದೃಢೀಕೃತ ನಕಲನ್ನು ನೀಡಿದ್ದು ಅದನ್ನು ನಿಪಿ-129 ಎಂದು ಗುರುತಿಸಲಾಯಿತು. ಮನೆಕಟ್ಟಲು ನೀಡಿದ ಪರವಾನಿಗೆ ಮತ್ತು ನಕ್ಷೆಯ ದೃಢೀಕೃತ ನಕಲುಗಳನ್ನು ನಿಪಿ-130 ಮತ್ತು ನಿಪಿ-131 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-**

ಇಲ್ಲ ಎಂದು ಹೇಳುತ್ತಾರೆ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**